# ACTION ON COURT CASES ON DISCIPLINARY MATTERS

| Sl.No | Date | Type | File No | Subject |
|---|---|---|---|---|
| 1. | 2.4.1963 | Official Memorandum | GAD 6 SIN 62 | Orders of dismissal, removal or compulsory retirement of Government servants from service set aside by Courts-Issue instructions for guidance of competent authorities. |
| 2. | 18.12.1981 | Official Memorandum | LAW 166 LAG 81 | Review of Court cases |
| 3. | 4.3.1982. | Official Memorandum | LAW 166 LAG 81(P) | Review of Judgments wherein decisions have been given by the courts against the State. |
| 4. | 14.3.1984 | Circular | DPAR 8 SDE 84 | Defending the cases/suits filed in Courts<br>against Government Instructions-reg. |
| 5. | 19.10.2002 | Circular | ಡಿಪಿಎಆರ್ 25 ಸೇಇವಿ 2002 | ನ್ಯಾಯಾಲಯದ ತೀರ್ಪು ಯಾವುದೇ ನಿಯಮಾವಳಿಗಳ ಪ್ರಕಾರ ಇಲ್ಲದೇ ಇದ್ದ ಪಕ್ಷದಲ್ಲಿ ಅಂತಹ ತೀರ್ಪಿನ ವಿರುದ್ಧ ಸರ್ಕಾರದಲ್ಲಿ ಮೇಲ್ಮನವಿಯನ್ನು ಸಲ್ಲಿಸುವ ಬಗ್ಗೆ ಸೂಚನೆಗಳು |
| 6. | 12-05-2009 | Circular | ಸಿಆಸುಇ 12 ಸೇಇವಿ 2009 | ನಿವೃತ್ತ ನೌಕರರ ವಿರುದ್ಧ ಬಾಕಿಯಿರುವ ಇಲಾಖಾ ವಿಚಾರಣೆ/ನ್ಯಾಯಾಂಗ ವಿಚಾರಣೆಯ ಬಗ್ಗೆ ಮಾಹಿತಿಯನ್ನು ಸರ್ಕಾರಿ ವಕೀಲರಿಗೆ ನೀಡುವ ಬಗ್ಗೆ |
| 7. | 27-09-2010 | Circular | ಸಿಆಸುಇ 28 ಸೇಇವಿ 2010 | ಕರ್ನಾಟಕ ಮಾನ್ಯ ಉಚ್ಚ ನ್ಯಾಯಾಲಯದ ಆದೇಶಗಳನ್ನು ಕಾಲಮಿತಿಯೊಳಗೆ ಪಾಲಿಸುವ ಬಗ್ಗೆ |
| 8. | 16.03.2013. | Circular | ಸಿಆಸುಇ 07 ಸೇಇವಿ 2013, | ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಕರ್ನಾಟಕ ಉಚ್ಚ ನ್ಯಾಯಾಲಯ ಮತ್ತು ಇತರ ನ್ಯಾಯಾಲಯಗಳು ನೀಡುವ ಆದೇಶಗಳ ಮೇಲೆ ಕ್ರಮ ತೆಗೆದುಕೊಳ್ಳುವ ಬಗ್ಗೆ. |
| 9. | 24.07.2013 | Circular | ಸಿಆಸುಇ 69 ಸೇಇವಿ 2013 | ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಕರ್ನಾಟಕ ಉಚ್ಚ ನ್ಯಾಯಾಲಯ ಮತ್ತು ಇತರ ನ್ಯಾಯಾಲಯಗಳು ನೀಡುವ ಆದೇಶಗಳ ಮೇಲೆ ಕ್ರಮ ತೆಗೆದುಕೊಳ್ಳುವ ಬಗ್ಗೆ |
| 10. | 06.02.2019 | Circular | ಸಿಆಸುಇ 13 ಸೇಇವಿ 2019 | ನ್ಯಾಯಾಲಯಗಳು ನೀಡಿದ ತೀರ್ಪಿನ ವಿರುದ್ಧ ಸಕಾಲದಲ್ಲಿ ಮೇಲ್ಮನವಿ ಸಲ್ಲಿಸುವ ಬಗ್ಗೆ ಸೂಚನೆಗಳು |

## GOVERNMENT OF MYSORE

No.GAD 6 SIN 62

Mysore Government Secretariat,
Vidhana Soudha,
General Administration Department
(Services -2),
Bangalore, dated 2nd April 1963.
Chaitra 12 Saka Era 1885.

## OFFICIAL MEMORANDUM

Sub: Orders of dismissal, removal or compulsory retirement of Government Servants from service set aside by Courts - Issue instructions for guidance of competent authorities.

******

It has been brought to the notice of Government that in many cases there has been undue delay on the part of competent authorities in taking appropriate action whenever an order dismissing, removing or compulsorily retiring a Government servant from service has been set aside by the Courts. Delays in such cases are not excusable. In order to ensure that delays in such matters do not occur, Government are pleased to issue the following instructions for the guidance of competent authorities.

2. According to sub-rule (4) of rule 10 of the Mysore Civil Service (Classification, Control & Appeal) Rules, 1957, when a penalty of dismissal, removal or compulsory retirement from service imposed on a Government servant is set aside or declared to render void in a consequence of a decision of a court of law, if the Disciplinary Authority, on a consideration of the circumstances of the case, decides to hold a further enquiry, the Government servant shall be deemed to have been placed under suspension by the Appointing Authority from the date of the original order of dismissal, removal or retirement and shall continue to remain under suspension until further orders. Consequently, the question of reinstatement of the concerned Government Servant should be decided after considering the feasibility of holding a fresh or a further enquiry into the matter. There may be cases where the competent authority finds that it is not expedient to hold a fresh or further enquiry because by lapse of time, evidence which was originally available is not longer available. In such cases, a decision should be taken, and where the original order had been the subject matter of an appeal to a higher authority with the approval of that authority, and the Government servant should be reinstated as soon as possible after the orders of the Court.

3. In cases where it is decided to hold a fresh or a further enquiry, it is open to the competent authority to reinstate the Government servant concerned if his continuance on duty would not prejudice the fresh or further enquiry so instituted or the gravity of the misconduct is not such as to be in-expedient in public interests to allow him to hold office. The important question will be whether in the light of the charges, the Govt. servant may be allowed to function in office or should be continued under suspension. Any decision for reinstatement depends on the decision of the competent authority on this question.

4. Where an appeal is preferred against the decision of the Court no action should be taken under these instructions except with the approval of the Government.

5. The above instructions should be followed scrupulously and no delay should be allowed to occur between the date of the direction of a Court and action by the competent authority consequent upon the decision.

Sd/-

**K.Narayanaswamy,**

Chief Secretary to Government.

## GOVERNMENT OF KARNATAKA

No.LAW 166 LAG 81

Karnataka Government Secretariat,
Vidhana Soudha,
Bangalore, Dated 18th December 1981.

## OFFICIAL MEMORANDUM

**Sub: Review of Court Cases.**

*****

It has been observed that in good number of cases in which the State of Karnataka is a party, decisions of the Courts go aganist it. This has not only embarassed the State but has also contributed considerably to the delay in implementing the several welfare measures, besides forcing the state to incur avoidable huge expenditure, which the State can ill afford in the present critical financial position. An immediate necessity has therefore arisen to undertake a through study of the cases in which the decisions of the Courts have gone aganist the State with a view to finding out the exact causes as to why Courts had to give decisions adverse to the State.

2. Broadly speaking the reasons for the decisions adverse to the State could be attributed to one or more of the following reasons:-

(1) failure on the part of the departments concerned to place the full facts and the records relevant to the case before the Court;

(2) failure to present the State's case effectively i.e. failure to file suitable statement with all relevant facts and law and to point out the relevant ruling, if any, of the Courts in support of the State's case;

(3) the defective drafting of the law rules, orders etc; and

(4) not following of rules and procedure prescribed by law.

3. However, in order to pin point where excatly the defect lay in each case and to take remedial steps in order to see that such a defect does not reoccur it has been decided that a review of the records relating to the cases in which decisions have been given by the courts aganist the state should be undertaken in a meeting of the following officers:-

1. Additional Chief Secretary;
2. Advocate-General or his representative;
3. Secretary to Government of the concerned department; and
4. Secretary to Government, Department of Law and Parliamentary Affairs.

4. To begin with, it has been decided that such a review should be confined to the orders made aganist the State by the High Court in Writ Petitions or Writ Appeals. The process of such a review could be extended to the decisions of the other Courts also in furture.

5. After the close of a month and in the first week of the succeeding month the Department of Law and Parliamentary Affairs would collect copies of the orders of the Courts in which decisions are given aganist the State during the previous month and convene a meeting in the chambers of the Additional Chief Secretary on a date and time in the second week of the succeeding month to be notified. The meeting will be attended to by the Advocate-General or his representative, the Secretary to Government, Department of Law and Parliamentary Affairs and the Secretary to Government of the department concerned for the purpose of the review.

6. The first meeting to review the orders of the High Court received in the month of December 1981 would accordingly be held in the month of January 1982.

7. In complicated and important cases as and when arguments are scheduled to be heard by the High Court it is desirable to have meetings of the Advocate in charge of the case, the Secretary of the department concerned and the Secretary to Government, Department of Law and Parliamentary Affairs a day or two earlier to the date fixed for arguments and again once or twice as may be necessary if the arguments last for more than one or two days to study the progress of the case and the points raised in the Court so that a combined effort may be made to effectively meet the points raised by the other side. Secretary, Department of Law and Parliamentary Affairs who will be in touch with the concerned Advocates will kindly arrange for such meetings.

8. All the Secretaries to Government are requested to extend their full co-operation in this exercise.

sd/-
**R.A.Naik,**
Additional Chief Secretary to Government.

**GOVERNMENT OF KARNATAKA**

No.LAW 166 LAG 81(P)

Karnataka Government Secretariat,
Vidhana Soudha,
Bangalore, Dated : 4th March 1982.

**OFFICIAL MEMORANDUM**

**Sub:-** Review of judgments wherein decisions have been given by the Courts aganist the State.

**Ref:-** O.M. No. LAW 166 LAG 81, dated 18.12.1981.

******

Para 5 of the O.M. dated 18.12.1981 referred to above envisages convening of a meeting in the chambers of the Additional Chief Secretary on a date and time in the second week of the succeeding month to be notified, for reviewing the judgments relating to the cases wherein decisions have been given by the Courts against the State.

It is now considered necessary that such review should be taken at the level of the Chief Secretary to Government of Karnataka.

In partial modifications of O.M. dated 18.12.1981 referred to above, it is hereby directed that the meeting as envisaged in Para 5 of the aforesaid O.M. shall be convened under the Chairmanship of the Chief Secretary to Government of Karnataka in the last week of the succeeding month (date and time to be fixed in consultation with the Chief Secretary).

sd/-
**R.A.Naik,**
Chief Secretary to Government

**GOVERNMENT OF KARNATAKA**

No.DPAR 8 SDE 84

Karnataka Government Secretariat,
Vidhana Soudha
Bangalore, dated the 14th March 1984.

## CIRCULAR

**Sub:-** Defending the cases/suits filed in Courts against Government-Instructions-reg.
Government have come across cases in which suits filed against Government

*****

Departments were decided ex-parte on the ground that the Government Pleaders
authorized by Government to defend the suits did not appeal on the dates of hearing. Another reason for such a situation is that the defendant Heads of Departments do not pursue the suits/cases with Government Pleaders with proper care and ensure effective defence.

Departmental Heads as defendants to suits are responsible to see that effective steps are taken in time to defend the cases, giving no room for any laxity on their part in pursuing the cases with Government counsels. Government, therefore direct that in cases/suits filed against Government in Courts, the concerned Heads of Departments and Officers should take necessary action to defend by providing timely assistance to the defense counsels authorized by Government and pursue the cases till they are heard and decided by the Courts.

The Secretaries to Government are requested to bring these instructions to the notice of the Heads of Departments and all other concerned Officers/Officials. The Secretary, Department of Law and Parly. Affairs in particular is requested to issue suitable instructions to the District Government Pleaders.

sd/-
**A.H. Someshwar**
Joint Secretary to Government, Department of
Personnel & Admnv.
Reforms, (Service Rules)

## ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 25 ಸೇಇವಿ 2002

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ,
ಬೆಂಗಳೂರು, ದಿನಾಂಕ: 19.10.2002

## ಸುತ್ತೋಲೆ

**ವಿಷಯ:** ನ್ಯಾಯಾಲಯದ ತೀರ್ಪು ಯಾವುದೇ ನಿಯಮಾವಳಿಗಳ ಪ್ರಕಾರ ಇಲ್ಲದೇ ಇದ್ದ ಪಕ್ಷದಲ್ಲಿ ಅಂತಹ ತೀರ್ಪಿನ ವಿರುದ್ಧ ಸಕಾಲದಲ್ಲಿ ಮೇಲ್ಮನವಿಯನ್ನು ಸಲ್ಲಿಸುವ ಬಗ್ಗೆ ಸೂಚನೆಗಳು.

**ಉಲ್ಲೇಖ:** (1) 25.8.1990ರ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 25 ಸೇಇವಿ 90.
(2) ದಿನಾಂಕ: 9.7.2001ರ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 6 ಸೇಅನ್ಯಾ 2001.
(3) ಕರ್ನಾಟಕ ವಿಧಾನ ಮಂಡಲದ ಅಧೀನ ಶಾಸನ ರಚನಾ ಸಮಿತಿಯ 2001-2002ರ ಹನ್ನೊಂದನೆ ವಿಧಾನ ಸಭೆ- ಇಪ್ಪತ್ತೆಂಟನೇ ವರದಿಯ ಶಿಫಾರಸ್ಸು.

*******

ಉಲ್ಲೇಖಿತ (1)ರ ದಿನಾಂಕ: 25.8.1990ರ ಅಧಿಕೃತ ಜ್ಞಾಪನದಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯ ಮತ್ತು ಇತರೇ ನ್ಯಾಯಾಲಯಗಳು ರಿಟ್ ಅರ್ಜಿ, ಮೇಲ್ಮನವಿ ಮನವಿ ಮತ್ತು ಮೊಕದ್ದಮೆಗಳಲ್ಲಿ ನೀಡಿರುವ ಆದೇಶಗಳನ್ನು ಮತ್ತು ಇತ್ಯರ್ಥವಾಗದೇ ಬಾಕಿ ಉಳಿದಿರುವ ರಿಟ್ ಅರ್ಜಿ, ಮೊಕದ್ದಮೆ ಮತ್ತು ಮೇಲ್ಮನವಿ ಮನವಿಗಳನ್ನು ಪುನರ್ ಅವಲೋಕಿಸುವ ಬಗ್ಗೆ ಸೂಚನೆಗಳನ್ನು ನೀಡಲಾಗಿದೆ.

2) ಉಲ್ಲೇಖಿತ (2)ರ ದಿನಾಂಕ: 9.7.2001ರ ಅಧಿಕೃತ ಜ್ಞಾಪನದಲ್ಲಿ ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಕರ್ನಾಟಕ ಉಚ್ಚ ನ್ಯಾಯಾಲಯ ಮತ್ತು ಇತರೆ ನ್ಯಾಯಾಲಯಗಳು ನೀಡಿರುವ ಆದೇಶಗಳ ಮೇಲೆ ಕ್ರಮ ತೆಗೆದುಕೊಳ್ಳುವ ಬಗ್ಗೆ ಸೂಚನೆಗಳನ್ನು ನೀಡಲಾಗಿದೆ.

3) ವಿಧಾನ ಮಂಡಲದ ಅಧೀನ ಶಾಸನ ರಚನಾ ಸಮಿತಿ 2001-2002 (ಹನ್ನೊಂದನೆಯ ವಿಧಾನ ಸಭೆ) ತನ್ನ ಇಪ್ಪತ್ತೆಂಟನೆ ವರದಿಯಲ್ಲಿ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲು ವಿಳಂಬವಾದ ಒಂದು ಪ್ರಕರಣವನ್ನು ಗಮನಿಸಿ, " ನ್ಯಾಯಾಲಯದ ತೀರ್ಪು ಸರ್ಕಾರದ ಯಾವುದೇ ನಿಯಮವಳಿಗಳ ಪ್ರಕಾರ ಇಲ್ಲದೆ ಇದ್ದ ಪಕ್ಷದಲ್ಲಿ ಅಂತಹ ತೀರ್ಪಿನ ವಿರುದ್ಧ ಸಕಾಲದಲ್ಲಿ ಮೇಲ್ಮನವಿಯನ್ನು ಸಲ್ಲಿಸಲು ಕ್ರಮ ಕೈಗೊಳ್ಳಬೇಕು" ಎಂದು ಶಿಫಾರಸ್ಸು ಮಾಡಿದೆ.

4) ಅಧೀನ ಶಾಸನ ರಚನಾ ಸಮಿತಿಯ ಮೇಲ್ಕಂಡ ಶಿಫಾರಸ್ಸಿನಂತೆ ನ್ಯಾಯಾಲಯದ ತೀರ್ಪು ಸರ್ಕಾರದ ಯಾವುದೇ ನಿಯಮಗಳ ಪ್ರಕಾರ ಇಲ್ಲದೇ ಇದ್ದ ಪಕ್ಷದಲ್ಲಿ ಅಂತಹ ತೀರ್ಪಿನ ವಿರುದ್ಧ ಸಕಾಲದಲ್ಲಿ ಮೇಲ್ಮನವಿಯನ್ನು ಸಲ್ಲಿಸಲು ಕ್ರಮ ಕೈಗೊಳ್ಳುತಕ್ಕದ್ದು.

5) ಆದುದರಿಂದ, ಸರ್ಕಾರದ ಪ್ರಧಾನ ಕಾರ್ಯದರ್ಶಿ: ಕಾರ್ಯದರ್ಶಿಗಳು ಹಾಗೂ ಇಲಾಖಾ ಮುಖ್ಯಸ್ಥರು ಸದರಿ ಸಮಿತಿಯ ಶಿಫಾರಸ್ಸಿನಂತೆ ಕ್ರಮ ಕೈಗೊಳ್ಳತಕ್ಕದ್ದು, ಈ ಸೂಚನೆಗಳನ್ನು ಸಂಬಂಧಪಟ್ಟ ಎಲ್ಲರ ಗಮನಕ್ಕೆ ತರತಕ್ಕದ್ದು.

**ಕೆ.ಎಲ್, ಜಯರಾಮ್**
ಸರ್ಕಾರದ ಅಧೀನ ಕಾರ್ಯದರ್ಶಿ-2,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು),

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 12 ಸೇಇವಿ 2009

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ,
ಬೆಂಗಳೂರು, ದಿನಾಂಕ: 12-05-2009

**ಸುತ್ತೋಲೆ**

ವಿಷಯ: ನಿವೃತ್ತ ನೌಕರರ ವಿರುದ್ಧ ಬಾಕಿಯಿರುವ ಇಲಾಖಾ ವಿಚಾರಣೆ/ನ್ಯಾಯಾಂಗ ವಿಚಾರಣೆಯ ಬಗ್ಗೆ ಮಾಹಿತಿಯನ್ನು ಸರ್ಕಾರಿ ವಕೀಲರಿಗೆ ನೀಡುವ ಬಗ್ಗೆ

****

ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ವಿಶ್ರಾಂತಿ ವೇತನ ಪಾವತಿಗಾಗಿ ಸಲ್ಲಿಸಲಾಗುವ ಅನೇಕ ಅರ್ಜಿಗಳಲ್ಲಿ ಸಂಬಂಧಿತ ನೌಕರರ ವಿರುದ್ಧ ಹೂಡಲಾದ ನ್ಯಾಯಾಂಗ ಅಥವಾ ಇಲಾಖಾ ವಿಚಾರಣೆಗಳ ಕುರಿತ ಮಾಹಿತಿಯನ್ನು ಸಂಬಂಧಿತ ಇಲಾಖೆಗಳು ಸರ್ಕಾರಿ ವಕೀಲರಿಗೆ ನೀಡದಿರುವುದರಿಂದ ಆಡಳಿತ ನ್ಯಾಯಮಂಡಳಿಯು ಆ ಪ್ರಕರಣಗಳನ್ನು ವಿಲೇವಾರಿ ಮಾಡುವಲ್ಲಿ ವಿಳಂಬವಾಗುತ್ತಿದೆಯೆಂದು ನ್ಯಾಯಮಂಡಳಿಯು ಅವಲೋಕಿಸಿದೆ. ಅರ್ಜಿ ಸಂಖ್ಯೆ: 4653/2008 ರಲ್ಲಿ ದಿನಾಂಕ: 15-01-2009ರಂದು ನ್ಯಾಯ ಮಂಡಳಿಯು ಈ ಕೆಳಕಂಡಂತೆ ಅವಲೋಕನೆ ಮಾಡಿದೆ.

"We are finding in many such application filed for release of pensionary benefits, the apathy of the Department to submit whether any department or judicial proceedings is pending against the applicant petitioner. In Majority of cases, months together, they do not infor as to whether any department or judicial proceedings is pending. Many such Applications are pending for years together in view of the failure of the department to furnish information to the Government pleader. Such applications cannot be kept pending if there is no departmental or criminal case against the concerned pensioner".

2.ಮೇಲ್ಕಂಡ ಅವಲೋಕನೆಯ ಹಿನ್ನೆಲೆಯಲ್ಲಿ ಸರ್ಕಾರಿ ವಕೀಲರಿಗೆ ಅಗತ್ಯ ಮಾಹಿತಿಯನ್ನು ಸಕಾಲದಲ್ಲಿ ಒದಗಿಸುವ ವ್ಯವಸ್ಥೆ ಮಾಡಬೇಕೆಂದು ಸೂಚಿಸಲಾಗಿದೆ.

3.ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು/ಇಲಾಖಾ ಮುಖ್ಯಸ್ಥರು ಈ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಹಾಗೂ ಅವರ ವ್ಯಾಪ್ತಿಯಲ್ಲಿ ಬರುವ ಇತರ ಅಧಿಕಾರಿಗಳ ಗಮನಕ್ಕೆ ಸೂಚಿಸಿದೆ.

**(ಕೆ.ಆರ್.ಶ್ರೀನಿವಾಸ)**
ಸರ್ಕಾರದ ಕಾರ್ಯದರ್ಶಿ
ಸಿಬ್ಬಂಧಿ ಮತ್ತು ಆಡಳಿತ ಸುಧಾರಣೆ ಇಲಾಖೆ

## ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 28 ಸೇಇವಿ 2010

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ,
ಬೆಂಗಳೂರು, ದಿನಾಂಕ: 27ನೇ ಸೆಪ್ಟೆಂಬರ್, 2010.

## ಸುತ್ತೋಲೆ

ವಿಷಯ: ಕರ್ನಾಟಕ ಮಾನ್ಯ ಉಚ್ಛ ನ್ಯಾಯಾಲಯದ ಆದೇಶಗಳನ್ನು ಕಾಲಮಿತಿಯೊಳಗೆ ಪಾಲಿಸುವ ಬಗ್ಗೆ.

*****

ಕರ್ನಾಟಕ ಮಾನ್ಯ ಉಚ್ಛ ನ್ಯಾಯಾಲಯದ ಆದೇಶಗಳನ್ನು ಸರ್ಕಾರವು ಕಾಲಮಿತಿಯೊಳಗೆ ಪಾಲಿಸದಿರುವ ಕಾರಣ ದಾಖಲಾಗಿರುವ ನ್ಯಾಯಾಲಯ ನಿಂದನಾ ಅರ್ಜಿಯೊಂದರ ವಿಚಾರಣೆಯ ಸಮಯದಲ್ಲಿ ಮಾನ್ಯ ಮುಖ್ಯ ನ್ಯಾಯಾಧೀಶರನ್ನೊಳಗೊಂಡ ವಿಭಾಗೀಯ ಪೀಠವು ದಿನಾಂಕ: 13-09-2010 ರಂದು ಈ ವಿಚಾರವನ್ನು ಬಹಳ ಗಂಭೀರವಾಗಿ ಪರಿಗಣಿಸಿದ್ದು, ಇನ್ನು ಮುಂದೆ ಮಾನ್ಯ ಉಚ್ಛ ನ್ಯಾಯಾಲಯದ ಆದೇಶಗಳನ್ನು ಪಾಲಿಸದಿರುವ ಸಂಬಂಧಪಟ್ಟ ಸರ್ಕಾರಿ ಅಧಿಕಾರಿಗಳನ್ನು ವೈಯುಕ್ತಿಕವಾಗಿ ಜವಾಬ್ದಾರರನ್ನಾಗಿ ಮಾಡಿ ಅವರಿಗೆ ರೂ.25,000/-ದಿಂದ ರೂ.50,000/-ದ ವರೆಗೆ ದಂಡನೆಯನ್ನು ವಿಧಿಸುವುದರ ಜೊತೆಗೆ ಸದರಿ ಅಧಿಕಾರಿಯ ಸೇವಾ ವಹಿಯಲ್ಲಿ ಈ ಬಗ್ಗೆ ಷರಾವನ್ನು ದಾಖಲಾತಿ ಮಾಡುವಂತೆ ನಿರ್ದೇಶನ ನೀಡಿರುವುದಾಗಿ ಮಾನ್ಯ ಅಡ್ವೋಕೇಟ್ ಜನರಲ್ ಅವರು ಸರ್ಕಾರಕ್ಕೆ ತಿಳಿಸಿರುವರು.

ಈ ವಿಷಯದ ಬಗ್ಗೆ ದಿನಾಂಕ: 23-09-2010ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ/ಕಾರ್ಯದರ್ಶಿಗಳ ಸಭೆಯಲ್ಲಿ ವಿಸ್ತೃತವಾಗಿ ಚರ್ಚಿಸಲಾಯಿತು.

ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಸರ್ಕಾರದ ಮಟ್ಟದಲ್ಲಿ ಕಾಲಮಿತಿಯೊಳಗೆ ವಿಮರ್ಶೆ ಮಾಡಿ, ಮಾನ್ಯ ಉಚ್ಛ ನ್ಯಾಯಾಲಯದ ಆದೇಶಗಳನ್ನು ಒಪ್ಪಿಕೊಂಡು ಅದನ್ನು ಪಾಲಿಸುವ ಬಗ್ಗೆ ಅಥವಾ ಸದರಿ ಆದೇಶವನ್ನು ಸಕ್ಷಮ ನ್ಯಾಯಾಲಯದಲ್ಲಿ /ಪ್ರಾಧಿಕಾರದ ಮುಂದೆ ಪ್ರಶ್ನಿಸುವ ಬಗ್ಗೆ ವಿವಿಧ ಹಂತದಲ್ಲಿ ಪ್ರಸ್ತುತ ನಿರ್ಧಾರ ಕೈಗೊಳ್ಳುವಲ್ಲಿ ಆಗುತ್ತಿರುವ ವಿಳಂಬವೇ ಅರ್ಜಿದಾರರು ನ್ಯಾಯಾಲಯಗಳ ಮುಂದೆ ನ್ಯಾಯಾಲಯ ನಿಂದನಾ ಅರ್ಜಿ ಸಲ್ಲಿಸಲು ಎಡೆ ಮಾಡಿಕೊಡುತ್ತಿದೆ ಎಂಬುದನ್ನು ಮನಗಂಡು, ಈ ದಿಸೆಯಲ್ಲಿ ಆಗಬಹುದಾದ ವಿಳಂಬವನ್ನು ತಪ್ಪಿಸಲು ಹಾಗೂ ವಿಧಿವತ್ತಾಗಿ ಸಮುಚಿತ ಹಂತದಲ್ಲಿ ಶೀಘ್ರವಾಗಿ ನಿರ್ಧಾರವನ್ನು ಕೈಗೊಳ್ಳಲು ಕೆಳಕಂಡ ವಿಧಾನವನ್ನು ಅನುಸರಿಸಲು ಎಲ್ಲರೂ ತಮ್ಮ ಸಹಮತಿಯನ್ನು ಸೂಚಿಸಿದರು:

1. ಮಾನ್ಯ ಉಚ್ಛ ನ್ಯಾಯಲಯ ಅಥವಾ ನ್ಯಾಯಾಧೀಕರಣಗಳು ಸರ್ಕಾರದ ವಿರುದ್ಧ ದಾಖಲಾದ ಪ್ರಕರಣಗಳನ್ನು ಇತ್ಯರ್ಥಗೊಳಿಸಿ ಆದೇಶಗಳನ್ನು ಹೊರಡಿಸಿದ ಹದಿನೈದು ದಿನಗಳೊಳಗೆ ಸದರಿ ಪ್ರಕರಣಗಳನ್ನು ನಿರ್ವಹಿಸಿದ ಸರ್ಕಾರಿ ವಕೀಲರು ಈ ಆದೇಶಗಳ ವಿರುದ್ಧ ಮೇಲ್ಮನವಿ ಸಲ್ಲಿಸಬಹುದೇ ಅಥವಾ ಆದೇಶವನ್ನು ಪಾಲಿಸಬೇಕೇ ಎಂಬ ಬಗ್ಗೆ ತಮ್ಮ ಸ್ಪಷ್ಟ ಅಭಿಪ್ರಾಯದೊಂದಿಗೆ ಆದೇಶದ ಪ್ರತಿಯನ್ನು ಸಂಬಂಧಪಟ್ಟ ಆಡಳಿತಾತ್ಮಕ ಇಲಾಖೆಗೆ ತಪ್ಪದೆ ಕಳುಹಿಸಿಕೊಡತಕ್ಕದ್ದು.
2. ಒಂದು ವೇಳೆ ಸರ್ಕಾರಿ ವಕೀಲರು ಈ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸದೆ ನ್ಯಾಯಾಲಯದ ಆದೇಶವನ್ನು ಪಾಲಿಸುವುದು ಉಚಿತವೆಂಬ ಅಭಿಪ್ರಾಯಪಟ್ಟಲ್ಲಿ, ಸಂಬಂಧಪಟ್ಟ ಇಲಾಖೆಯು ಮುಂದಿನ ಹದಿನೈದು ದಿನಗಳೊಳಗೆ ಸದರಿ ಆದೇಶವನ್ನು ಜಾರಿಗೊಳಿಸತಕ್ಕದ್ದು, ಒಂದು ವೇಳೆ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು ಸರ್ಕಾರಿ ವಕೀಲರ ಅಭಿಪ್ರಾಯವನ್ನು ಒಪ್ಪದೆ,

ಮೇಲ್ಮನವಿ ಸಲ್ಲಿಸಬೇಕೆಂಬ ನಿಲುವನ್ನು ತಾಳಿದಲ್ಲಿ, ಈ ಆದೇಶಗಳ ವಿರುದ್ಧ ಯಾವ ಕಾರಣಕ್ಕಾಗಿ ಮೇಲ್ಮನವಿ ಸಲ್ಲಿಸಬೇಕೆಂಬ ಬಗ್ಗೆ ಕಾರಣಗಳನ್ನು ವಿವರಣೆಯೊಂದಿಗೆ ಎರಡು ದಿನಗಳೊಳಗೆ ಕಡತವನ್ನು ಕಾನೂನು ಇಲಾಖೆಯ ಕಾರ್ಯದರ್ಶಿಯವರಿಗೆ ಕಳುಹಿಸಿ ಕೊಡತಕ್ಕದ್ದು.

3. ಕಾನೂನು ಇಲಾಖೆಯ ಕಾರ್ಯದರ್ಶಿಯವರು ಕಡತವು ಸ್ವೀಕೃತಿಯಾದ ಹತ್ತು ದಿನಗಳೊಳಗೆ ನ್ಯಾಯಾಲಯದ ಆದೇಶವನ್ನು ಜಾರಿಗೊಳಿಸುವ ಅಥವಾ ಮೇಲ್ಮನವಿ ಸಲ್ಲಿಸುವ ಬಗ್ಗೆ ತಮ್ಮ ಅಭಿಪ್ರಾಯವನ್ನು ಸಂಬಂಧಪಟ್ಟ ಪ್ರಧಾನ ಕಾರ್ಯದರ್ಶಿಯವರಿಗೆ/ಕಾರ್ಯದರ್ಶಿಯವರಿಗೆ ತಿಳಿಸತಕ್ಕದ್ದು. 10 ದಿನಗಳೊಳಗೆ ಅವರು ತಮ್ಮ ಅಭಿಪ್ರಾಯವನ್ನು ನೀಡದಿದ್ದಲ್ಲಿ ಮೇಲ್ಮನವಿ ಸಲ್ಲಿಸಲು ಅವರು ತಮ್ಮ ಸಹಮತಿಯನ್ನು ನೀಡಿದ್ದಾರೆ ಎಂದು ಭಾವಿಸಲಾಗುವುದು. ಒಂದು ವೇಳೆ ಮೇಲ್ಮನವಿ ಸಲ್ಲಿಸಬೇಕೆಂಬ ಅಭಿಪ್ರಾಯವನ್ನು ಕಾನೂನು ಇಲಾಖೆಯ ಕಾರ್ಯದರ್ಶಿಯವರು ನೀಡಿದಲ್ಲಿ ತಕ್ಷಣ ಸರ್ಕಾರಿ ವಕೀಲರನ್ನು ಸಂಪರ್ಕಿಸಿ ಮುಂದಿನ ಎರಡು ದಿನಗಳೊಳಗೆ ಮೇಲ್ಮನವಿ ಸಲ್ಲಿಸಲು ಕ್ರಮಕೈಗೊಳ್ಳತಕ್ಕದ್ದು. ಒಂದು ವೇಳೆ, ಕಾನೂನು ಕಾರ್ಯದರ್ಶಿಗಳು ಮೇಲ್ಮನವಿ ಸಲ್ಲಿಸುವುದು ಉಚಿತವಲ್ಲವೆಂದು ಅಭಿಪ್ರಾಯಪಟ್ಟಲ್ಲಿ, ಮತ್ತು ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಅಭಿಪ್ರಾಯವನ್ನು ಒಪ್ಪದಿದ್ದಲ್ಲಿ, ಮತ್ತು ಸದರಿ ಆದೇಶ ವಿರುದ್ಧ ಮೇಲ್ಮನವಿ ಸಲ್ಲಿಸಲೇಬೇಕೆಂಬ ದೃಢವಾದ ನಿಲುವಾದ ತಾಳಿದಲ್ಲಿ ಕಡತವನ್ನು ಕೂಡಲೇ ಮುಖ್ಯ ಕಾರ್ಯದರ್ಶಿಯವರಿಗೆ ಸಲ್ಲಿಸತಕ್ಕದ್ದು.
4. ಇದರ ಬಗ್ಗೆ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿತವಾದ ಸಮಿತಿಯು ನಿರ್ಧಾರವನ್ನು ತೆಗೆದುಕೊಳ್ಳುವುದು. ಈ ಸಮಿತಿಯಲ್ಲಿ ಕಾನೂನು ಇಲಾಖೆಯ ಕಾರ್ಯದರ್ಶಿಗಳು, ಸಂಬಂಧಪಟ್ಟ ಪ್ರಧಾನ ಕಾರ್ಯದರ್ಶಿಗಳು ಸದಸ್ಯರಾಗಿರುವರು.
5. ಮೇಲಿನಂತೆ ಸ್ವೀಕೃತಿಯಾದ ಕಡತದ ಬಗ್ಗೆ ಎರಡು ದಿನಗಳೊಳಗಾಗಿ ಸದರಿ ಸಮಿತಿಯು ನಿರ್ಧಾರವನ್ನು ಕೈಗೊಳ್ಳುವುದು. ಸಮಿತಿಯು ತೆಗೆದುಕೊಂಡ ನಿರ್ಧಾರವನ್ನು ಮುಂದಿನ ಏಳು ದಿನಗಳೊಳಗೆ ಸಂಬಂಧಪಟ್ಟ ಆಡಳಿತಾತ್ಮಕ ಇಲಾಖೆಯು ಪಾಲಿಸತಕ್ಕದ್ದು.

ಮೇಲಿನಂತೆ ಸಂಬಂಧಪಟ್ಟ ಆಡಳಿತಾತ್ಮಕ ಇಲಾಖೆಗಳ ನ್ಯಾಯಾಲಯದ ಆದೇಶಗಳನ್ನು ಕಾಲಮಿತಿಯೊಳಗೆ ಪಾಲಿಸುವ ಬಗ್ಗೆ ಕಟ್ಟುನಿಟ್ಟಾದ ಕ್ರಮ ಕೈಗೊಂಡಲ್ಲಿ ಅರ್ಜಿದಾರರು ನ್ಯಾಯಾಲಯಗಳಲ್ಲಿ ನ್ಯಾಯಾಲಯ ನಿಂದನಾ ಅರ್ಜಿಗಳನ್ನು ದಾಖಲು ಮಾಡುವ ಸಾಧ್ಯತೆಯು ತೀರಾ ಕಡಿಮೆಯಾಗುತ್ತದೆ.

ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು ತಮ್ಮ ಇಲಾಖೆಗಳಿಗೆ ಸಂಬಂಧಿಸಿದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ, ಆಡಳಿತ ನ್ಯಾಯಾಧೀಕರಣಗಳಲ್ಲಿ ಹಾಗೂ ಇತರ ನ್ಯಾಯಾಲಯಗಳಲ್ಲಿ ದಾಖಲಾಗಿರುವ ಹಾಗೂ ಆದೇಶ ಹೊರಡಿಸಲಾಗಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಕಾವಲು ವಹಿಯನ್ನು (Watch Register) ಇಟ್ಟುಕೊಂಡು, ಇಲಾಖೆಯ ಸಂಬಂಧಪಟ್ಟ ಉಪ ಕಾರ್ಯದರ್ಶಿಯವರು ಪ್ರಕರಣಗಳ ಪ್ರಗತಿಯನ್ನು ವಾರಕ್ಕೊಮ್ಮೆ ಪುನಾವಲೋಕಿಸತಕ್ಕದ್ದು ಸದರಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು ಪಾಕ್ಷೀಕವಾಗಿ ಪುನರಾವಲೋಕಿಸಿ, ಕಾಲಮಿತಿಯೊಳಗೆ ನ್ಯಾಯಾಲಯಗಳ ಆದೇಶಗಳಿಗೆ ಸಂಬಂಧಿಸಿದಂತೆ ಮೇಲಿನಂತೆ ಕ್ರಮಕೈಗೊಳ್ಳುವುದನ್ನು ಖಾತರಿಪಡಿಸಿಕೊಳ್ಳುವಂತೆ ಸೂಚಿಸಲಾಗಿದೆ.

ನ್ಯಾಯಾಲಯದ ಪ್ರಕರಣಗಳಿಗೆ ಸಂಬಂಧಿಸಿದಂತೆ (Watch Register) ನಲ್ಲಿ ವಿವರಗಳನ್ನು ದಾಖಲಿಸಿ ಕೆಳಕಂಡ ಕಾಲಮಿತಿಯನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು:-

ಅ) ಸರ್ಕಾರಿ ವಕೀಲರಿಗೆ ಕಂಡಿಕೆವಾರು ಉತ್ತರನವನು (Para-wise remarks)15 ದಿನಗಳೊಳಗೆ ಸಲ್ಲಿಸುವುದು.

ಆ) ಸರ್ಕಾರಿ ವಕೀಲರೊಂದಿಗೆ ನಿಕಟ ಸಂಪರ್ಕವನ್ನಿಟ್ಟುಕೊಂಡು, ನ್ಯಾಯಾಲಯವು ನಿಗದಿ ಮಾಡಿರುವ ಸಮಯದೊಳಗೆ ಸರ್ಕಾರಿ ವಕೀಲರು Written Statement ಸಲ್ಲಿಸಿದ್ದಾರೆಯೇ ಎಂಬುದನ್ನು ಖಾತರಿ ಮಾಡಿಕೊಳ್ಳತಕ್ಕದ್ದು.

ಇ) ನ್ಯಾಯಾಲಯವು ಮಧ್ಯಂತರ ಆದೇಶಗಳ ಮೂಲಕ ಹೊರಡಿಸುವಂತಹ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ದಿಶೆಯಲ್ಲಿ ಸರಿಯಾದ ಕ್ರಮಕೈಗೊಳ್ಳಲು ಅನುವಾಗುವಂತಾಗಲು ಪ್ರಕರಣದ ಪ್ರತಿಯೊಂದು ವಿಚಾರಣೆಯ ಸಮಯದಲ್ಲಿ (Date of hearing) ಒಬ್ಬ ಜವಾಬ್ದಾರಿಯುತ ಅಧಿಕಾರಿಯನ್ನು ನಿಯೋಜಿಸುವುದು ಮತ್ತು ಸರ್ಕಾರಿ ವಕೀಲರಿಗೆ ಬೇಕಾದ ಎಲ್ಲಾ ಮಾಹಿತಿಯನ್ನು ಕೂಡಲೇ ಒದಗಿಸುವುದು.

ಈ) ನ್ಯಾಯಾಲಯವು ಆದೇಶವನ್ನು ಹೊರಡಿಸಿದ ನಂತರ ಮೇಲೆ ವಿವರಿಸಿದಂತೆ ಕ್ರಮ ಕೈಗೊಳ್ಳತಕ್ಕದ್ದು.

ವಿವಿಧ ಇಲಾಖೆಗಳ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಸ್ತುತ ಬಾಕಿಯಿರುವ ನ್ಯಾಯಾಲಯ ನಿಂದನಾ ಪ್ರಕರಣಗಳಿಗೆ ಸಂಬಂಧಿಸಿದಂತೆ, ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು ವಿಮರ್ಶೆಯನ್ನು ನಡೆಸಿ, ನ್ಯಾಯಾಲಯದ ಆದೇಶಗಳನ್ನು ಮುಂದಿನ ಹತ್ತು ದಿನಗಳೊಳಗಾಗಿ ಪಾಲಿಸಲು ಅಥವಾ Stay Order ಪಡೆಯಲು ಕ್ರಮ ಕೈಗೊಂಡು, ಅನುಸರಣಾ ವರದಿಯನ್ನು ನನಗೆ ಸಲ್ಲಿಸತಕ್ಕದ್ದು.

ಜಿಲ್ಲಾ ಮಟ್ಟದಲ್ಲಿ/ತಾಲ್ಲೂಕು ಮಟ್ಟದಲ್ಲಿ ಸರ್ಕಾರದ ವಿರುದ್ಧ ದಾಖಲಾದ ನ್ಯಾಯಾಲಯದ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಹ ಮೇಲ್ಕಂಡಂತೆ ಕ್ರಮ ಕೈಗೊಳ್ಳಲು ಎಲ್ಲಾ ಇಲಾಖೆಗಳಿಗೆ/ಸಂಸ್ಥೆಗಳ ಮುಖ್ಯಸ್ಥರುಗಳಿಗೆ ಅಗತ್ಯ ಸೂಚನೆಗಳನ್ನು ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು ನೀಡತಕ್ಕದ್ದು.

ನ್ಯಾಯಾಲಯದ ಆದೇಶಗಳನ್ನು ಪಾಲಿಸುವ ವಿಚಾರದಲ್ಲಿ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು ಪೂರ್ಣವಾಗಿ ಜವಾಬ್ದಾರರಾಗಿದ್ದು, ಇನ್ನು ಮುಂದೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸರ್ಕಾರದ ವಿರುದ್ಧ ನ್ಯಾಯಾಲಯ ನಿಂದನಾ ಅರ್ಜಿಗಳು ದಾಖಲಾಗದಂತೆ ಮುನ್ನೆಚ್ಚರಿಕೆ ವಹಿಸಿ, ನ್ಯಾಯಾಲಯದ ಆದೇಶಗಳನ್ನು ಕಾಲಮಿತಿಯೊಳಗೆ ಪಾಲಿಸುವ ನಿಟ್ಟಿನಲ್ಲಿ ಕ್ರಮಕೈಗೊಳ್ಳುವಂತೆ ಕೋರಲಾಗಿದೆ.

**(ಎಸ್.ವಿ.ರಂಗನಾಥ್)**

ಸರ್ಕಾರದ ಮುಖ್ಯ ಕಾರ್ಯದರ್ಶಿ

## ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 07 ಸೇಇವಿ 2013

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ,
ಬೆಂಗಳೂರು, ದಿನಾಂಕ:16-03-2013.

## ಸುತ್ತೋಲೆ

ವಿಷಯ: ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಕರ್ನಾಟಕ ಉಚ್ಚ ನ್ಯಾಯಾಲಯ ಮತ್ತು ಇತರ ನ್ಯಾಯಾಲಯಗಳು ನೀಡುವ ಆದೇಶಗಳ ಮೇಲೆ ಕ್ರಮ ತೆಗೆದುಕೊಳ್ಳುವ ಬಗ್ಗೆ.

ಉಲ್ಲೇಖ;
1) ದಿನಾಂಕ: 25-08-1990ರ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 25 ಸೇಇವಿ 90.
2) ದಿನಾಂಕ: 09-07-2001ರ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 6 ಸೇಅನ್ಯಾ 2001.

******

ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಕರ್ನಾಟಕ ಉಚ್ಚ ನ್ಯಾಯಾಲಯ ಮತ್ತು ಇತರೆ ನ್ಯಾಯಾಲಯಗಳು ಅರ್ಜಿ, ರಿಟ್ ಅರ್ಜಿ ಮತ್ತು ಮೇಲ್ಮನವಿಗಳಲ್ಲಿ ನೀಡುವ ಆದೇಶಗಳನ್ನು ಪುನರಾವಲೋಕಿಸುವ ಬಗ್ಗೆ ಮತ್ತು ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳಲ್ಲಿ ಕ್ರಮ ತೆಗೆದುಕೊಳ್ಳುವ ಬಗ್ಗೆ ಉಲ್ಲೇಖ(1)ರಲ್ಲಿರುವ ಅಧಿಕೃತ ಜ್ಞಾಪನದಲ್ಲಿ ಸೂಚನೆಗಳನ್ನು ನೀಡಲಾಗಿರುತ್ತದೆ.

2.ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(2)ರ ಅಧಿಕೃತ ಜ್ಞಾಪನದಲ್ಲಿ ಹೆಚ್ಚುವರಿ ಸೂಚನೆಗಳನ್ನು ನೀಡಲಾಗಿರುತ್ತದೆ.

3.ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರಡಿ ಸಕ್ಷಮ ಪ್ರಾಧಿಕಾರ ಸರ್ಕಾರಿ ನೌಕರರನ್ನು ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸಿ ಅಥವಾ ಸೇವೆಯಿಂದ ತೆಗೆದು ಹಾಕಿ ಅಥವಾ ಸೇವೆಯಿಂದ ವಜಾ ಮಾಡಿದ ಆದೇಶದ ವಿರುದ್ಧ ಸಂಬಂಧಿಸಿದ ನೌಕರರು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿ ಸಲ್ಲಿಸಿ ಪ್ರಶ್ನಿಸಿದಾಗ, ನ್ಯಾಯ ಮಂಡಳಿಯು ಅಂತಹ ಆದೇಶಕ್ಕೆ ತಡೆಯಾಜ್ಞೆ ನೀಡಿದಲ್ಲಿ, ಅಂತಹ ತಡೆಯಾಜ್ಞೆಯನ್ನು ಅನುಷ್ಠಾನಗೊಳಿಸುವುದಕ್ಕೆ ಸಂಬಂಧಿಸಿದಂತೆ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ನ್ಯಾಯಾಲಯ ನಿಂದನಾ ಅರ್ಜಿ ಸಂಖ್ಯೆ:192/2012ರಲ್ಲಿ ದಿನಾಂಕ: 21.09.2012ರಂದು ನೀಡಿರುವ ಆದೇಶದಲ್ಲಿ ಈ ಕೆಳಕಂಡಂತೆ ಅವಲೋಕನೆ ಮಾಡಿರುತ್ತದೆ:-

> "It appears that the order of the Tribunal has not been properly understood by the Government. Indicate that it is only in such cases where the order of stay becomes inoperative or can not be obeyed that the party can plead his inability to obey the order. But here also, it is imperative that he shall appear before the court and shall seek modification of interim order.
>
> Where an order of dismissal, or of compulsory retirement or of discharge from service is challenged, the order of stay by court suspends the order impugned during the period of stay and therefore the authority is bound to take

back the relieved Government servant to duty. Therefore the respondent shall take back the applicant to duty forthwith and report compliance positively by 5.10.2012.

A copy of this order be furnished to the learned AGA and another copy shall be furnished to the Principal Secretary, DPAR, Government of Karnataka for giving necessary instructions to controlling authorities."

ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ನೀಡಿರುವ ಮೇಲ್ಕಂಡ ನಿರ್ದೇಶನವನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಎಲ್ಲಾ ನೇಮಕಾತಿ ಪ್ರಾಧಿಕಾರಿಗಳಿಗೆ ಈ ಮೂಲಕ ಸೂಚಿಸಲಾಗಿದೆ.

(ಡಾ|| ಮಂಗಳ ಜಿ.ಎಸ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂಧಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು-1).

**ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು**

**ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ**

**ಸುತ್ತೋಲೆ**

**ಸಂಖ್ಯೆ: ಸಿಆಸುಇ 69 ಸೇಇವಿ 2013, ಬೆಂಗಳೂರು, ದಿನಾಂಕ: 24.07.2013**

ವಿಷಯ: ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಕರ್ನಾಟಕ ಉಚ್ಚ ನ್ಯಾಯಾಲಯ ಮತ್ತು ಇತರ ನ್ಯಾಯಾಲಯಗಳು ನೀಡುವ ಆದೇಶಗಳ ಮೇಲೆ ಕ್ರಮ ತೆಗೆದುಕೊಳ್ಳುವ ಬಗ್ಗೆ.

ಉಲ್ಲೇಖ;
1) ದಿನಾಂಕ: 25-08-1990ರ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 25 ಸೇಇವಿ 90
2) ದಿನಾಂಕ: 09-07-2001ರ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 06 ಸೇಅನ್ಯಾ 2001
3) ದಿನಾಂಕ: 16-03-2013ರ ಸುತ್ತೋಲೆ ಸಂಖ್ಯೆ: ಸಿಆಸುಇ 07 ಸೇಇವಿ 2013.

*****

ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಕರ್ನಾಟಕ ಉಚ್ಚ ನ್ಯಾಯಾಲಯ ಮತ್ತು ಇತರೆ ನ್ಯಾಯಾಲಯಗಳು ಅರ್ಜಿ, ರಿಟ್‌ಅರ್ಜಿ ಮತ್ತು ಮೇಲ್ಮನವಿಗಳಲ್ಲಿ ನೀಡುವ ಆದೇಶಗಳನ್ನು ಪುನರಾವಲೋಕಿಸುವ ಬಗ್ಗೆ ಮತ್ತು ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳಲ್ಲಿ ಕ್ರಮ ತೆಗೆದುಕೊಳ್ಳುವ ಬಗ್ಗೆ ಉಲ್ಲೇಖ(1)ರಲ್ಲಿರುವ ಅಧಿಕೃತ ಜ್ಞಾಪನದಲ್ಲಿ ಸೂಚನೆಗಳನ್ನು ನೀಡಲಾಗಿರುತ್ತದೆ.

2) ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(2)ರ ಅಧಿಕೃತ ಜ್ಞಾಪನದಲ್ಲಿ ಹೆಚ್ಚುವರಿ ಸೂಚನೆಗಳನ್ನು ನೀಡಲಾಗಿರುತ್ತದೆ.

3) ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರಡಿ ಸಕ್ಷಮ ಶಿಸ್ತು ಪ್ರಾಧಿಕಾರ ಸರ್ಕಾರಿ ನೌಕರರನ್ನು ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸಿ ಅಥವಾ ಸೇವೆಯಿಂದ ತೆಗೆದು ಹಾಕಿ ಅಥವಾ ಸೇವೆಯಿಂದ ವಜಾ ಮಾಡಿದ ಆದೇಶದ ವಿರುದ್ಧ ಸಂಬಂಧಿಸಿದ ನೌಕರರು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿ ಸಲ್ಲಿಸಿ ಪ್ರಶ್ನಿಸಿದಾಗ, ನ್ಯಾಯ ಮಂಡಳಿಯು ಅಂತಹ ಆದೇಶಕ್ಕೆ ತಡೆಯಾಜ್ಞೆ ನೀಡಿದಲ್ಲಿ, ಅಂತಹ ತಡೆಯಾಜ್ಞೆಯನ್ನು ಅನುಷ್ಠಾನಗೊಳಿಸುವುದಕ್ಕೆ ಸಂಬಂಧಿಸಿದಂತೆ ಕರ್ನಾಟಕ ಆಡಳಿತ ನ್ಯಾಯಾ ಮಂಡಳಿಯು ನ್ಯಾಯಾಲಯ ನಿಂದನಾ ಅರ್ಜಿ ಸಂಖ್ಯೆ: 192/2012ರಲ್ಲಿ ದಿನಾಂಕ: 21-09-2012ರಂದು ನೀಡಿರುವ ಆದೇಶದಲ್ಲಿ ಮಾಡಿದ್ದ ಅವಲೋಕನೆಯನ್ನಾಧಿರಿಸಿ ಉಲ್ಲೇಖ(3)ರಲ್ಲಿನ ಸುತ್ತೋಲೆಯನ್ನು ಹೊರಡಿಸಲಾಗಿತ್ತು.

4) ವಿಲೇಖನಾಧಿಕಾರಿ, ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಇವರು ದಿನಾಂಕ: 12-04-2013ರಂದು ಸರ್ಕಾರಕ್ಕೆ ಬರೆದಿರುವ ಪತ್ರದಲ್ಲಿ ಉಲ್ಲೇಖ(3) ರಲ್ಲಿರುವ ದಿನಾಂಕ: 16-03-2013ರ ಸುತ್ತೋಲೆಯಲ್ಲಿ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ನ್ಯಾಯಾಲಯ ನಿಂದನಾ ಅರ್ಜಿ ಸಂಖ್ಯೆ: 192/2012ರಲ್ಲಿ ದಿನಾಂಕ: 21-09-2012ರಂದು ನೀಡಿರುವ ಆದೇಶದ ಪೂರ್ಣ ಪಾಠವನ್ನು

ಉದ್ಧರಿಸುವುದಿಲ್ಲವೆಂದು ತಿಳಿಸುತ್ತಾ ಸದರಿ ಆದೇಶವನ್ನು ಸಂಪೂರ್ಣವಾಗಿ ಉದ್ಧರಿಸಿ ಅದನ್ನು ಸರಿಯಾಗಿ ವ್ಯಾಖ್ಯಾನಿಸಿ ಸುತ್ತೋಲೆಯನ್ನು ಹೊರಡಿಸುವಂತೆ ಕೋರಿರುತ್ತಾರೆ.

5) ಮೇಲ್ಕಂಡ ಹಿನ್ನೆಲೆಯಲ್ಲಿ, ದಿನಾಂಕ: 16-03-2013ರ ಸುತ್ತೋಲೆ ಸಂಖ್ಯೆ: ಸಿಆಸುಇ 07 ಸೇಇವಿ 2013ನ್ನು ಮುಂದುವರೆಸುತ್ತಾ, ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ನ್ಯಾಯಾಲಯ ನಿಂದನಾ ಅರ್ಜಿ ಸಂಖ್ಯೆ: 192/2012ರಲ್ಲಿ ದಿನಾಂಕ: 21-09-2012ರಂದು ನೀಡಿರುವ ಆದೇಶದ ಪೂರ್ಣಪಾಠವನ್ನು ಕೆಳಗೆ ಉದ್ಧರಿಸಲಾಗಿದೆ.

> " Sri M.Nagarajan, learned AGA takes notice on behalf of respondents and submits that the order of stay only indicated that the order of dismissal was stayed but that since the order of dismissal had been given effect to before the order of stay was granted, the applicant has not been taken to duty. This type of thinking by the Government overlooks the fact that in all cases of dismissal, the order is given effect to immediately and only thereafter the aggrieved party will approach the court. The order of stay if granted by the court can not be considered as only paper order and if this type of stand is adopted by the Government there is no option for the Tribunal but to take action against the concerned officer for clear contempt of the Tribunal. It appears that the order of the Tribunal has not been properly understood by the Government. For the sake of clarification, we indicate that it is only in such cases, where the order of stay becomes inoperative or can not be obeyed that the party can plead his inability to obey the order. But here also it is imperative that he shall appear before the court and shall seek modification of interim order.
>
> Where an order of dismissal, or of compulsory retairement or of discharge from service is challenged, the order of stay by court suspends the order impugned during the period of stay and therefore the authority is bound to take back the relied Government servant to duty, Therefore the respondent shall take back the applicant to duty forthwith and report compliance positively by 05-10-2012.
>
> A copy of this order be furnished to the learned AGA and another copy shall be furnished to the Principal Secretary, DPAR, Government of Karnataka for giving necessary instructions to controlling authorities".

ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಮೇಲೆ ಉದ್ಧರಿಸಿದ ತೀರ್ಪನ್ನು ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು/ಇಲಾಖಾ ಮುಖ್ಯಸ್ಥರು, ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಶಿಸ್ತು ಪ್ರಾಧಿಕಾರಿಗಳ ಗಮನಕ್ಕೆ ತರಲು ಕೋರಿದೆ.

ಡಾ|| ಮಂಗಳ ಜಿ.ಎಸ್
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-1)

# ಕರ್ನಾಟಕ ಸರ್ಕಾರ

ಸಂಖ್ಯೆ:ಸಿಆಸುಇ 13 ಸೇಇವಿ 2019

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ
ಬೆಂಗಳೂರು, ದಿನಾಂಕ: 06.02.2019

## ಸುತ್ತೋಲೆ

**ವಿಷಯ:** ನ್ಯಾಯಾಲಯಗಳು ನೀಡಿದ ತೀರ್ಪಿನ ವಿರುದ್ಧ ಸಕಾಲದಲ್ಲಿ ಮೇಲ್ಮನವಿ ಸಲ್ಲಿಸುವ ಬಗ್ಗೆ ಸೂಚನೆಗಳು

*****

1) ಸಮಾಜ ಕಲ್ಯಾಣ ಇಲಾಖೆಯ ನ್ಯಾಯಾಲಯ ಪ್ರಕರಣವೊಂದರಲ್ಲಿ ಸಕಾಲದಲ್ಲಿ ಮೇಲ್ಮನವಿ ಸಲ್ಲಿಸುವ ನಿರ್ಣಯವನ್ನು ಆಡಳಿತ ಇಲಾಖೆಯು ಕೈಗೊಳ್ಳದೇ ಅದು ನ್ಯಾಯಾಲಯ ನಿಂದಾನ ಮೊಕದ್ದಮೆಯಾಗಿರುವುದನ್ನು ಗಮನಿಸಲಾಗಿದೆ. ಇದರಿಂದ ಸರ್ಕಾರ ನ್ಯಾಯಾಲಯದ ತೀರ್ಪನ್ನು ಜಾರಿಗೊಳಿಸುವ ಅನಿವಾರ್ಯ ಪರಿಸ್ಥಿತಿ ಉಂಟಾಗಿದೆ. ಆಡಳಿತ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರು ನ್ಯಾಯಾಲಯ ಪ್ರಕರಣಗಳಲ್ಲಿ ಮೇಲ್ಮನವಿ ಸಲ್ಲಿಸುವ ಅಧಿಕಾರ ಪ್ರತ್ಯಾಯೋಜನೆಯನ್ನು ಹೊಂದಿದ್ದರೂ ಸಹ ಹಲವು ಪ್ರಕರಣಗಳಲ್ಲಿ ಆಡಳಿತ ಇಲಾಖೆಗಳು ಮೇಲ್ಮನವಿ ಸಲ್ಲಿಸದೇ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ /ಕಾನೂನು ಇಲಾಖೆಯ ಅಭಿಪ್ರಾಯಕ್ಕಾಗಿ ಕಡತಗಳನ್ನು ಕಳುಹಿಸುತ್ತಿರುವುದನ್ನು ಗಮನಿಸಿದೆ. ಇದು ಸರಿಯಾದ ಕ್ರಮವಲ್ಲ.

2) ಕರ್ನಾಟಕ ಸರ್ಕಾರ ವ್ಯವಹಾರ (ವ್ಯವಹಾರ ಹಂಚಿಕೆ) 1977ರ ಷೆಡ್ಯೂಲ್ XI-A-9 ರಲ್ಲಿ ಕೆಳಕಂಡಂತೆ ಆಸ್ಪಾದ ಕಲ್ಪಿಸಿದೆ.

> "ಕರ್ನಾಟಕ ಆಡಳಿತ ನ್ಯಾಯ ಮಂಡಳಿ ಅಥವಾ ಕೇಂದ್ರ ಆಡಳಿತ ನ್ಯಾಯ ಮಂಡಳಿಯ ಆದೇಶ ಅಥವಾ ಉಚ್ಚ ನ್ಯಾಯಲಯದ ಯಾವುದೇ ನಿರ್ಣಯದ ವಿರುದ್ಧದ ಮೇಲ್ಮನವಿ ಅಥವಾ ಪುನರೀಕ್ಷಣೆಯ ನಿರ್ಣಯವನ್ನು ಪರಿಗಣಿಸಲು ರಿಟ್ ಅಥವಾ ರಿಟ್ ಮೇಲ್ಮನವಿಯನ್ನು ಸಂಬಂಧಪಟ್ಟ ಆಡಳಿತ ಇಲಾಖೆಯು ತೆಗೆದುಕೊಳ್ಳತಕ್ಕದ್ದು ಮತ್ತು ಅದಕ್ಕೆ ಸಂಬಂಧಿಸಿದಂತಹ ಅಥವಾ ಎಲ್ಲಾ ವಿಚಾರಗಳನ್ನು ಈ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ಕಾನೂನು ಅಧಿಕಾರಿಗಳ ಪ್ರಾಮಾಣೀಕರಣವನ್ನು ಒಳಗೊಂಡಂತೆ ಅದನ್ನು ಸಂಬಂಧಪಟ್ಟ ಆಡಳಿತ ಇಲಾಖೆಯೇ ಕೈಗೊಳ್ಳತಕ್ಕದ್ದು.
>
> ಪರಂತು, ಕರ್ನಾಟಕ ಆಡಳಿತ ನ್ಯಾಯಮಂಡಳಿ ಅಥವಾ ಕೇಂದ್ರ ಆಡಳಿತ ಮಂಡಳಿಯ ಆದೇಶ ಅಥವಾ ಉಚ್ಚ ನ್ಯಾಯಾಲಯದ ಯಾವುದೇ ನಿರ್ಣಯದ ವಿರುದ್ಧ ರಿಟ್ ಅಥವಾ ರಿಟ್ ಮೇಲ್ಮನವಿಯನ್ನು ಪರಿಗಣಿಸದೇ ಇರಲು ಕಾನೂನು ಇಲಾಖೆಯ ಅಭಿಪ್ರಾಯವನ್ನು ತೆಗೆದುಕೊಳ್ಳತಕ್ಕದ್ದು.

3) ಮೇಲ್ಮನವಿ ಸಲ್ಲಿಸುವ ತೀರ್ಮಾನವನ್ನು ಕೈಗೊಳ್ಳಲು ಇಲಾಖಾ ಕಾರ್ಯದರ್ಶಿಗಳೇ ಅಧಿಕಾರ ಪ್ರತ್ಯಾಯೋಜನೆ ಹೊಂದಿರುವುದರಿಂದ ಇನ್ನು ಮುಂದೆ ಮೇಲ್ಮನವಿ ಸಲ್ಲಿಸಬೇಕಾದ ನ್ಯಾಯಾಲಯ ಪ್ರಕರಣಗಳಲ್ಲಿ ಸಿಬ್ಬಂಧಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಅಭಿಪ್ರಾಯಕ್ಕಾಗಿ ಕಡತಗಳನ್ನು ಪ್ರಸ್ತಾಪಿಸದೇ ತಮ್ಮ ಹಂತದಲ್ಲಿಯೇ ಮೇಲ್ಮನವಿ ಸಲ್ಲಿಸುವ ನಿರ್ಣಯ ಕೈಗೊಳ್ಳಲು ಎಲ್ಲಾ ಆಡಳಿತ ಇಲಾಖೆಗಳಿಗೆ ಈ ಮೂಲಕ ಸೂಚಿಸಿದೆ. ಅದರಂತೆ ನ್ಯಾಯಾಲಯ ನಿಂದನಾ ಮೊಕದ್ದಮೆಯನ್ನು ಹೂಡುವುದಕ್ಕೆ ಆಸ್ಪದವಾಗದಂತೆ, ನ್ಯಾಯಾಲಯಗಳು ನೀಡಿರುವ ತೀರ್ಪುಗಳ ವಿರುದ್ಧ ಮೇಲ್ಮನವಿ ಸಲ್ಲಿಸುವ ಕುರಿತು ನಿರ್ಣಯವನ್ನು ಆಡಳಿತ ಇಲಾಖೆಯ ಮುಖ್ಯಸ್ಥರಾದ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು ಅತ್ಯಂತ ತ್ವರಿತವಾಗಿ ಕೈಗೊಳ್ಳಲು ಸೂಚಿಸಿದೆ.

4) ಸಿ.ಆ.ಸು ಇಲಾಖೆ ಹಾಗೂ ಕಾನೂನು ಇಲಾಖೆಗಳಿಗೆ, ಮೇಲ್ಮನವಿ ಸಲ್ಲಿಸುವ ಬಗ್ಗೆ ಅಭಿಪ್ರಾಯ ಕೋರಲು ಕಳುಹಿಸಿರುವ ಕಡತಗಳನ್ನು ಮೇಲಿನ ಆಸ್ಪದವನ್ನು ಉಲ್ಲೇಖಿಸುತ್ತಾ ಅಂತಹ ಕಡತಗಳನ್ನು ಕೂಡಲೇ ಹಿಂತಿರುಗಿಸಲು ತಿಳಿಸಿದೆ.

5) ಒಂದು ವೇಳೆ ಆಡಳಿತ ಇಲಾಖೆಯ ಮುಖ್ಯಸ್ಥರು ಮೇಲ್ಮನವಿ ಸಲ್ಲಿಸದೇ ಕಡತವನ್ನು ಅನಗತ್ಯವಾಗಿ ಸಿಬ್ಬಂಧಿ ಮತ್ತು ಆಡಳಿತ ಸುಧಾರಣಾ ಇಲಾಖೆ ಅಥವಾ ಕಾನೂನು ಇಲಾಖೆಯ ಅಭಿಪ್ರಾಯಕ್ಕೆ ಕಳುಹಿಸಿ ಅದರಿಂದ ಮೇಲ್ಮನವಿ ಸಲ್ಲಿಸಲು ವಿಳಂಬವಾಗಿ ಸರ್ಕಾರದ ಹಿತಾಸಕ್ತಿಗೆ ಧಕ್ಕೆಯಾದಲ್ಲಿ ಅಂತಹ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ, ತಪ್ಪಿತಸ್ಥ ಅಧಿಕಾರಿ/ನೌಕರರ ವಿರುದ್ಧ ನಿಯಮಾನುಸಾರ ಕ್ರಮ ವಹಿಸಲಾಗುವುದು ಈ ಸೂಚನೆಗಳನ್ನು ಎಲ್ಲಾ ಆಡಳಿತ ಇಲಾಖೆಯ ಮುಖ್ಯಸ್ಥರು ಗಮನವಹಿಸಿ ಅಗತ್ಯ ಕ್ರಮವಹಿಸಬೇಕೆಂದು ಸೂಚಿಸಿದೆ.

**(ತ.ಮ.ವಿಜಯಭಾಸ್ಕರ್)**
ಸರ್ಕಾರದ ಮುಖ್ಯ ಕಾರ್ಯದರ್ಶಿ